# ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

## ಅಕ್ಟೋಬರ್ ೦೯, ೨೦೨೦ರ ಶುಕ್ರವಾರದಂದು ನಡೆದ ಕಾರ್ಯಕಾರಿ ಸಮಿತಿ ೨೦೪ನೇ ಸಭೆಯ ನಡೆವಳಿಗಳು

ಸಭೆಯಲ್ಲಿ ಉಪಸ್ಥಿತರಿದ್ದವರು:

| | |
|---|---|
| ೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಪ್ರೊ. ಹೆಚ್.ಎಸ್. ರಘುನಾಥ, ಶಿವಮೊಗ್ಗ | : ಸದಸ್ಯರು |
| ೦೩. ಪ್ರೊ. ಹೆಚ್.ಎಂ. ಚನ್ನಪ್ಪಗೋಳ, ಬೆಳಗಾವಿ | : ಸದಸ್ಯರು |
| ೦೪. ಪ್ರೊ. ಜಿ.ಸಿ. ರಾಜಣ್ಣ, ಮೈಸೂರು | : ಸದಸ್ಯರು |
| ೦೫. ಶ್ರೀಮತಿ ನಯನಾ ಎಸ್., ಬೆಂಗಳೂರು | : ಸದಸ್ಯರು |
| ೦೬. ಶ್ರೀ ಪ್ರಶಾಂತ್ ಭೀಮಯ್ಯ, ಮಡಿಕೇರಿ | : ಸದಸ್ಯರು |
| ೦೭. ಶ್ರೀ ಜೈಭೀಮ್, ಕಲಬುರಗಿ | : ಸದಸ್ಯರು |
| ೦೮. ಡಾ. ವೈ.ಎಂ. ಭಜಂತ್ರಿ | : ಸದಸ್ಯರು |
| ೦೯. ಶ್ರೀ ಸಮಿಉಲ್ಲಾ ಖಾನ್, ಬೆಂಗಳೂರು | : ಸದಸ್ಯರು |
| ೧೦. ಡಾ. ವೀರೇಶ್ ಬಡಿಗೇರ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೧೧. ಡಾ. ಸಿ.ಮಹದೇವ, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೨. ಡಾ. ಕೆ.ರವೀಂದ್ರನಾಥ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೧೩. ಡಾ. ಮಾಧವ ಪೆರಾಜೆ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೪. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

ಸಭೆಯಲ್ಲಿ ಅನುಪಸ್ಥಿತರಿದ್ದವರು:

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೬. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ನಂತರ ಇತ್ತೀಚೆಗೆ ನಮ್ಮನ್ನಗಲಿದ ಮಾಜಿ ರಾಷ್ಟ್ರಪತಿಗಳಾದ ಶ್ರೀ ಪ್ರಣಬ್ ಮುಖರ್ಜಿ, ನಾಡೋಜ ಗೌರವ ಪುರಸ್ಕೃತರಾದ ಶ್ರೀಮತಿ ಸುಭದ್ರಮ್ಮ ಮನ್ಸೂರ್, ಪ್ರೊ. ಕೆ.ಎಸ್. ನಿಸಾರ್ ಅಹಮದ್, ಕೇಂದ್ರ ಸಚಿವರಾದ ಶ್ರೀ ಸುರೇಶ ಅಂಗಡಿ, ಶ್ರೀ ರಾಮವಿಲಾಸ್ ಪಾಸ್ವಾನ್, ಖ್ಯಾತ ಹಿನ್ನೆಲೆಗಾಯಕರಾದ ಶ್ರೀ ಎಸ್.ಪಿ.ಬಾಲಸುಬ್ರಮಣ್ಯಂ, ರಾಜ್ಯಸಭೆ ಸದಸ್ಯರಾದ ಶ್ರೀ ಅಶೋಕ ಗಸ್ತಿ, ಶಾಸಕ ಶ್ರೀ ನಾರಾಯಣರಾವ್ ಮುಂತಾದವರ ಆತ್ಮಕ್ಕೆ ಶಾಂತಿ ಕೋರಿ ಸಭೆ ಸಂತಾಪ ಸೂಚಿಸಿತು.

ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ವಿಷಯ : ದಿನಾಂಕ ೧೯.೦೩.೨೦೨೦ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೩ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

ನಿರ್ಣಯ: ದಿನಾಂಕ ೧೯.೦೩.೨೦೨೦ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೩ನೇ ಸಭೆಯ ನಡೆವಳಿಯನ್ನು ಸ್ಥಿರೀಕರಿಸಿ ಸಭೆ ಅನುಮೋದನೆ ನೀಡಿತು.

ವಿಷಯ : ದಿನಾಂಕ ೧೯.೦೩.೨೦೨೦ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೩ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

ನಿರ್ಣಯ: ದಿನಾಂಕ ೧೯.೦೩.೨೦೨೦ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೩ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡಿತು.

೨೦೪.೧೧ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ಪರಿಷ್ಕೃತ ಅನುಶಾಸನಕ್ಕೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ಪರಿಷ್ಕೃತ ಅನುಶಾಸನವನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೦೨ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಪರಿಷ್ಕೃತ ಅನುಶಾಸನಕ್ಕೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಪರಿಷ್ಕೃತ ಅನುಶಾಸನವನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೦೩ ಸ್ನಾತಕೋತ್ತರ ಪದವಿ, ಸ್ನಾತಕೋತ್ತರ ಡಿಪ್ಲೊಮಾ, ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳ ಪರಿಷ್ಕೃತ ಅನುಶಾಸನಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸ್ನಾತಕೋತ್ತರ ಪದವಿ, ಸ್ನಾತಕೋತ್ತರ ಡಿಪ್ಲೊಮಾ, ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳ ಪರಿಷ್ಕೃತ ಅನುಶಾಸಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೦೪ ಕನ್ನಡ ವಿಶ್ವವಿದ್ಯಾಲಯದಲ್ಲಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಲು ಸಭೆ ಅನುಮೋದನೆ ನೀಡಿತು.

೨೦೪.೦೫ ಕನ್ನಡ ವಿಶ್ವವಿದ್ಯಾಲಯದಲ್ಲಿ ಯೋಗ ಚಿಕಿತ್ಸೆ, ಪ್ರಕೃತಿ ಚಿಕಿತ್ಸೆ–ಪಂಚಕರ್ಮ, ಆಕ್ಯುಪಂಕ್ಚರ್ ಫುಡ್ ನ್ಯೂಟ್ರೇಷನ್ ಮತ್ತು ಡಯಟ್ ಇತ್ಯಾದಿ ಡಿಪ್ಲೊಮಾ ಕೋರ್ಸ್‌ಗಳನ್ನು ಆರಂಭಿಸಲು ಹಾಗೂ ಪಠ್ಯಕ್ರಮ ಸಿದ್ಧಪಡಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಯೋಗ ಚಿಕಿತ್ಸೆ, ಪ್ರಕೃತಿ ಚಿಕಿತ್ಸೆ–ಪಂಚಕರ್ಮ, ಆಕ್ಯುಪಂಕ್ಚರ್ ಫುಡ್ ನ್ಯೂಟ್ರೇಷನ್ ಮತ್ತು ಡಯಟ್ ಇತ್ಯಾದಿ ಡಿಪ್ಲೊಮಾ ಕೋರ್ಸ್‌ಗಳನ್ನು ಆರಂಭಿಸಲು ಹಾಗೂ ಪಠ್ಯಕ್ರಮ ಸಿದ್ಧಪಡಿಸಲು ಸಭೆ ಅನುಮೋದನೆ ನೀಡಿತು.

೨೦೪.೦೬ ವಸ್ತುಸಂಗ್ರಹಾಲಯ ಮತ್ತು ಪ್ರವಾಸೋದ್ಯಮ ಸಂಶೋಧನ ಕೇಂದ್ರದಲ್ಲಿ ಪ್ರತಿನಿಯೋಜನೆಯ ಮೇಲೆ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸುವಂತೆ ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಗಂಗಾಧರ ದೈವಜ್ಞ ಇವರು ದಿನಾಂಕ ೧೮.೦೬.೨೦೨೦ರಂದು ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಸದರಿ ಮನವಿಯನ್ನು ಸಭೆಯು ಪರಿಶೀಲಿಸಿ ಅವರ ಸೇವೆಯನ್ನು ಬುಡಕಟ್ಟು ಅಧ್ಯಯನ ವಿಭಾಗದಲ್ಲಿಯೇ ಮುಂದುವರಿಸಲು ಸಭೆ ತೀರ್ಮಾನಿಸಿತು.

೨೦೪.೦೭ ಶ್ರೀ ಜೈಭೀಮ್ ಆರ್. ಕಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು ಇವರು ದಿನಾಂಕ ೨೦.೦೩.೨೦೨೦ರಂದು ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಶ್ರೀ ಜೈಭೀಮ್ ಆರ್. ಕಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು ಇವರು ದಿನಾಂಕ ೨೦.೦೩.೨೦೨೦ರಂದು ಸಲ್ಲಿಸಿರುವ ಮನವಿ ಕುರಿತು ಚರ್ಚಿಸಲಾಗಿ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಸದರಿ ಮನವಿಯ ಹಿನ್ನೆಲೆಯಲ್ಲಿ ಕಳೆದ ಅವಧಿಯಿಂದ (ದಿನಾಂಕ ೦೯.೦೯.೨೦೧೫ ರಿಂದ) ಪ್ರಸ್ತುತ ಪತ್ರದ ಅವಧಿ ವರೆಗೆ ವಿಶ್ವವಿದ್ಯಾಲಯದಲ್ಲಿ ತಾಂತ್ರಿಕ ವಿಭಾಗದ ಮೂಲಕ ಕೈಗೊಳ್ಳಲಾದ ವಿವಿಧ ಕಾಮಗಾರಿಗಳು ಮತ್ತು ಅವುಗಳಿಗೆ ತಗುಲಿದ ವೆಚ್ಚಗಳ ಪರಿಶೀಲನೆಗಾಗಿ ಕೆಳಕಂಡ ಕಾರ್ಯಕಾರಿ ಸಮಿತಿ ಸದಸ್ಯರನ್ನೊಳಗೊಂಡ ಪರಿಶೀಲನಾ ಸಮಿತಿಯನ್ನು ರಚಿಸುವುದು.

| | | |
|---|---|---|
| i | ಪ್ರೊ. ಜಿ.ಸಿ.ರಾಜಣ್ಣ | ಅಧ್ಯಕ್ಷರು |
| ii | ಪ್ರೊ. ಹೆಚ್.ಎಸ್. ರಘುನಾಥ | ಸದಸ್ಯರು |
| iii | ಶ್ರೀ ಪ್ರಶಾಂತ್ ಭೀಮಯ್ಯ | ಸದಸ್ಯರು |
| iv. | ಶ್ರೀ ಸಮೀಉಲ್ಲಾ ಖಾನ್ | ಸದಸ್ಯರು |

೨೦೪.೦೮ ಶ್ರೀ ಜೈಭೀಮ್ ಆರ್. ಕಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು ಇವರು ದಿನಾಂಕ ೧೭.೦೭.೨೦೨೦ರಂದು ಸಲ್ಲಿಸಿರುವ ಮನವಿಯಂತೆ ಕನ್ನಡ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಅನ್ವಯ ಐದು ವರ್ಷ ಸೇವೆಯನ್ನು ಪೂರೈಸಿ ಅದೇ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ ಮತ್ತು ಇಲಾಖಾ ಮುಂಬಡ್ತಿ ಸಮಿತಿಯನ್ನು ನೇಮಿಸುವ ಕುರಿತು.

ನಿರ್ಣಯ : ಈ ಕುರಿತು ಸಭೆಯು ಪರಿಶೀಲಿಸಿ ಸರಕಾರದ ಸೇವಾ ನಿಯಮಗಳ ಅನುಸಾರ ಇಲಾಖಾ ಮುಂಬಡ್ತಿ ಸಮಿತಿಯನ್ನು ಮಾನ್ಯ ಕುಲಪತಿಯವರು ರಚಿಸಲು ಅನುಮೋದನೆ ನೀಡಿತು.

೨೦೪.೦೯ ದಿನಾಂಕ ೦೪.೦೫.೨೦೨೦ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೧೦ ದಿನಾಂಕ ೧೯.೦೬.೨೦೨೦ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೧೧ ದಿನಾಂಕ ೦೧.೦೭.೨೦೨೦ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೧೨ ದಿನಾಂಕ ೨೫.೦೮.೨೦೨೦ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೧೩ ದಿನಾಂಕ ೨೧.೦೯.೨೦೨೦ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೧೪ ದಿನಾಂಕ ೨೬.೦೮.೨೦೨೦ರಂದು ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕದ ೨೦೨೦-೨೧ನೇ ಸಾಲಿನ ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಮಂಡಿಸಲಾದ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೧೫ ದಿನಾಂಕ ೨೬.೦೮.೨೦೨೦ರಂದು ನಡೆದ ಖರೀದಿ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಮಂಡಿಸಲಾದ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೧೬ ಕನ್ನಡ ವಿಶ್ವವಿದ್ಯಾಲಯದಲ್ಲಿ ದಿನಾಂಕ ೨೯.೦೪.೧೯೯೭ ರಿಂದ ಕಸಗುಡಿಸುವವ ಹುದ್ದೆಯಲ್ಲಿ ಖಾಯಂ ಆಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಗೌಳಿ ನಾಗರಾಜ ಇವರು ಜವಾನ ಹುದ್ದೆಗೆ ಪದನಾಮ ಬದಲಾವಣೆ ಕೋರಿ ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಜವಾನ ಹುದ್ದೆಗೆ ಪದನಾಮ ಬದಲಾವಣೆ ಮಾಡಿ ಆದೇಶ ನೀಡಿರುವ ಕ್ರಮಕ್ಕೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ನಿರೀಕ್ಷಿಸಿ, ಶ್ರೀ ಗೌಳಿ ನಾಗರಾಜ ಇವರಿಗೆ ಕಸಗುಡಿಸುವ ಹುದ್ದೆಯಿಂದ ಜವಾನ ಹುದ್ದೆಗೆ ಪದನಾಮ ಬದಲಾವಣೆ ಮಾಡಿ ಆದೇಶ ನೀಡಿರುವ ಕ್ರಮಕ್ಕೆ ಸಭೆ ಅನುಮೋದನೆ ನೀಡಿತು.

೨೦೪.೧೭ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರ ಪತ್ರ ದಿನಾಂಕ ೨೨.೦೬.೨೦೨೦ರ ಕೋರಿಕೆಯಂತೆ ಶ್ರೀ ಕೆ.ಎಂ. ಕುಬೇರಪ್ಪ, ಕಿರಿಯ ಅಭಿಯಂತರರು ಇವರ ಪ್ರತಿನಿಯೋಜನಾ ಅವಧಿಯನ್ನು ದಿನಾಂಕ ೧೮.೦೬.೨೦೧೯ ರಿಂದ ಅನ್ವಯವಾಗುವಂತೆ ಮುಂದುವರಿಸಲು ಕೋರಿರುವ ಬಗ್ಗೆ.

ನಿರ್ಣಯ : ಸದರಿ ಇಲಾಖೆಯ ಕೋರಿಕೆ ಹಾಗೂ ಶ್ರೀ ಕೆ.ಎಂ. ಕುಬೇರಪ್ಪ ಇವರ ಮನವಿಯನ್ನು ಸಭೆಯು ಪರಿಶೀಲಿಸಿ ದಿನಾಂಕ.೧೮.೦೬.೨೦೧೯ರಿಂದ ಅನ್ವಯವಾಗುವಂತೆ ಎರಡು ವರ್ಷಗಳ (ದಿನಾಂಕ ೧೭.೦೬.೨೦೨೧ ರವರೆಗೆ) ಅವಧಿಗೆ ಪ್ರತಿನಿಯೋಜನಾ ಅವಧಿಯನ್ನು ಮುಂದುವರಿಸಲು ಸಭೆ ಅನುಮೋದನೆ ನೀಡಿತು.

೨೦೪.೧೮ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದ ತೀರ್ಪಿನಂತೆ ಡಾ. ಎಂ.ಸಿ. ಗುಡಿಮನಿ ಅವರಿಗೆ ಸಹಾಯಕ ಗ್ರಂಥಪಾಲಕರಾಗಿ ದಿನಾಂಕ [illegible].೫.೨೦೦೬ ರಿಂದ ಜಾರಿಗೆ ಬರುವಂತೆ ಆದೇಶ ನೀಡಲಾಗಿದೆ. ಸದರಿಯವರ ಸೇವಾ ಪೂರ್ವಾವಧಿ ಘೋಷಣೆಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ನಡೆಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿಯವರ ವಿಷಯವನ್ನು ಸಭೆಯು ಪರಿಶೀಲಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಾನುಸಾರ, ಯಾವುದೇ ಆರ್ಥಿಕ ಸೌಲಭ್ಯವನ್ನು ನೀಡದೆ/ವಿಸ್ತರಿಸದೆ ಸೇವಾ ಪೂರ್ವಾವಧಿ ಘೋಷಣೆಯ ಪ್ರಕ್ರಿಯೆಗಳನ್ನು ವಿಶ್ವವಿದ್ಯಾಲಯದ ಅಧಿನಿಯಮ/ಪರಿನಿಯಮಗಳಲ್ಲಿ ಉಪಬಂಧಿಸಿದ ರೀತ್ಯಾ ಕ್ರಮಕೈಗೊಳ್ಳಬಹುದೆಂದು ಸಭೆ ತೀರ್ಮಾನಿಸಿತು.

೨೦೪.೧೯ ಶ್ರೀಮತಿ ರೇಣುಕಮ್ಮ ಗಂಡ ದಿವಂಗತ ಶ್ರೀ ಹನುಮಂತರಾಯ ಇವರ ಅವಲಂಬಿತ 'ಕುಟುಂಬ' ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ದಿನಾಂಕ ೧೦.೧೦.೨೦೧೯ರಂದು ಸಲ್ಲಿಸಿರುವ ಮನವಿ ಕುರಿತು. ೨೦೨.೧೩ನೇ ಸಭೆಯ ನಿರ್ಣಯದಂತೆ ಮಾಹಿತಿಯನ್ನು ಸಂಗ್ರಹಿಸಿ ಅಗತ್ಯ ದಾಖಲೆಗಳೊಂದಿಗೆ ಕಾರ್ಯಕಾರಿ ಸಮಿತಿಗೆ ಮಂಡಿಸಿದೆ.

ನಿರ್ಣಯ : ಮಂಡಿಸಲಾದ ವಿಷಯವನ್ನು ಸಭೆಯು ಮುಂದಿನ ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸಲು ತೀರ್ಮಾನಿಸಿತು.

೨೦೪.೨೦ ಶ್ರೀಮತಿ ಬಿ. ಲಲಿತ, ಗಂಡ ದಿವಂಗತ ಶ್ರೀ ಬಿ. ರಾಮಕೃಷ್ಣ ಇವರ ಅವಲಂಬಿತ 'ಕುಟುಂಬ' ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ದಿನಾಂಕ ३೦.೧೨.೨೦೧೯ರಂದು ಸಲ್ಲಿಸಿರುವ ಮನವಿ ಕುರಿತು. ೨೦೨.೧೪ನೇ ಸಭೆಯ ನಿರ್ಣಯದಂತೆ ಮಾಹಿತಿಯನ್ನು ಸಂಗ್ರಹಿಸಿ ಅಗತ್ಯ ದಾಖಲೆಗಳೊಂದಿಗೆ ಕಾರ್ಯಕಾರಿ ಸಮಿತಿಗೆ ಮಂಡಿಸಿದೆ.

ನಿರ್ಣಯ : ಮಂಡಿಸಲಾದ ವಿಷಯವನ್ನು ಪರಿಶೀಲಿಸಿದ ಸಭೆಯು ಮುಂದಿನ ಕಾರ್ಯಕಾರಿ ಸಮಿತಿಯಲ್ಲಿ ತತ್ಸಂಬಂಧವಾದ ಇನ್ನಷ್ಟು ಮಾಹಿತಿ–ದಾಖಲೆಗಳೊಂದಿಗೆ ಮಂಡಿಸಲು ತೀರ್ಮಾನಿಸಿತು.

೨೦೪.೨೧ ಶ್ರೀಮತಿ ಎಸ್. ಪದ್ಮಾವತಿ ಗಂಡ ದಿವಂಗತ ಶ್ರೀ ಸೋಮಶೇಖರ ಇವರು ತಮಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ದಿನಾಂಕ ೦೨.೦೧.೨೦೨೦ರಂದು ಸಲ್ಲಿಸಿರುವ ಮನವಿ ಕುರಿತು. ೨೦೨.೨೩ನೇ ಸಭೆಯ ನಿರ್ಣಯದಂತೆ ಮಾಹಿತಿಯನ್ನು ಸಂಗ್ರಹಿಸಿ ಅಗತ್ಯ ದಾಖಲೆಗಳೊಂದಿಗೆ ಕಾರ್ಯಕಾರಿ ಸಮಿತಿಗೆ ಮಂಡಿಸಿದೆ.

ನಿರ್ಣಯ : ಮಂಡಿಸಲಾದ ವಿಷಯವನ್ನು ಸಭೆಯು ಮುಂದಿನ ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸಲು ತೀರ್ಮಾನಿಸಿತು.

೨೦೪.೨೨ ಡಾ. ಎಸ್. ಮೋಹನ್, ಪ್ರಕಟಣ ಸಹಾಯಕರು ಇವರು ಪ್ರಕಟಣ ಸಹಾಯಕ ಹುದ್ದೆಯಿಂದ ಅಧ್ಯಾಪಕ ಹುದ್ದೆಗೆ ಮೇಲ್ದರ್ಜೆಗೇರಿಸುವಂತೆ ಕೋರಿ ದಿನಾಂಕ ೨೮.೦೯.೨೦೨೦ರಂದು ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಸದರಿಯವರ ಮನವಿಯನ್ನು ಸಭೆಯು ಚರ್ಚಿಸಿ, ವಿಸ್ತೃತ ಮಾಹಿತಿಗಳೊಂದಿಗೆ ಮುಂದಿನ ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸಲು ಸಭೆಯು ತೀರ್ಮಾನಿಸಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೦೪.೨೩ ದಿನಾಂಕ ೦೧.೧೦.೨೦೨೦ರಂದು ನಡೆದ ಡೀನ್ ಸಮಿತಿ ಸಭೆ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೨೪ ಯೋಗ ಅಧ್ಯಯನ ವಿಭಾಗದ ಅನುಶಾಸನಕ್ಕೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಯೋಗ ಅಧ್ಯಯನ ವಿಭಾಗದ ಅನುಶಾಸನವನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೨೫ ೨೮ನೇ ನುಡಿಹಬ್ಬ/ಘಟಿಕೋತ್ಸವ ಕಾರ್ಯಕ್ರಮದ ಪ್ರಕ್ರಿಯೆಗಳಿಗೆ ಹಾಗೂ ಖರ್ಚು ವೆಚ್ಚಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಮಂಡಿಸಲಾದ ವಿಷಯವನ್ನು ಸಭೆಯು ಪರಿಶೀಲಿಸಿ ೨೮ನೇ ನುಡಿಹಬ್ಬ/ಘಟಿಕೋತ್ಸವ ಕಾರ್ಯಕ್ರಮದ ಪ್ರಕ್ರಿಯೆಗಳಿಗೆ ಹಾಗೂ ಖರ್ಚು ವೆಚ್ಚಗಳಿಗೆ ನಿಯಮಾನುಸಾರ ಕ್ರಮಕೈಗೊಳ್ಳಲು ಸಭೆ ಅನುಮೋದನೆ ನೀಡಿತು.

೨೦೪.೨೬ ದಿನಾಂಕ ೦೮.೧೦.೨೦೨೦ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಉನ್ನತ ಸಲಹಾ ಸಮಿತಿ ಸಭೆಯ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಮಂಡಿಸಲಾದ ನಡವಳಿಗಳನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ಕ್ರಮವಹಿಸಲು ಸೂಚಿಸಿ ಅನುಮೋದನೆ ನೀಡಿತು.

i ೨ ವರ್ಷಗಳ ಕಲಾಮೂಲ ಹಾಗೂ ಡಿಪ್ಲೊಮಾ ಕೋರ್ಸ್‌ಗಳಿಗೆ ಸಂಬಂಧಪಟ್ಟಂತೆ ವಿವಿಧ ಚಿತ್ರಕಲಾ ಮಹಾ ವಿದ್ಯಾಲಯಗಳು ಅನುಸರಿಸುತ್ತಿರುವ ಕ್ರಮಗಳ ಬಗೆಗೆ ಚಿತ್ರಕಲಾ ಮಹಾ ವಿದ್ಯಾಲಯಗಳ ನಿರ್ವಹಣ ಕೇಂದ್ರದ ಉನ್ನತ ಸಲಹಾ ಸಮಿತಿಯು ಪರಿಶೀಲನೆ ನಡೆಸುವುದು.

ii ಬಿ.ವಿ.ಎ ಕೋರ್ಸ್‌ಗಳನ್ನು ನಡೆಸದೇ ಕೇವಲ ಕಲಾಮೂಲ ಹಾಗೂ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸುತ್ತಿರುವ ವಿದ್ಯಾಲಯಗಳಿಗೆ ಮುಂದಿನ ಸಾಲಿನಲ್ಲಿ ನವೀಕರಣ ನೀಡದಿರುವುದು.

೨೦೪.೨೭ ದಿನಾಂಕ ೦೮.೧೦.೨೦೨೦ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ೧೯ನೇ ಉನ್ನತ ಸಲಹಾ ಸಮಿತಿ ಸಭೆಯ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಮಂಡಿಸಲಾದ ನಡವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೪.೨೮ ದಿನಾಂಕ ೦೮.೧೦.೨೦೨೦ರಂದು ಡಾ. ಸಿದ್ಧಗಂಗಮ್ಮ, ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಇವರು ಸೆಬಾಟಿಕಲ್ ರಜೆ ಕೋರಿ ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಡಾ. ಸಿದ್ಧಗಂಗಮ್ಮ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ ಇವರು ಒಂದು ವರ್ಷ ಕಾಲ ಸೆಬಾಟಿಕಲ್ ರಜೆ ಕೋರಿ ಸಲ್ಲಿಸಿದ **(ಅಭಿವೃದ್ಧಿ ಮತ್ತು ಗಣಿಬಾಧಿತ ಹಳ್ಳಿಗಳು : ಒಂದು ಅಧ್ಯಯನ)** ಪ್ರಸ್ತಾವವನ್ನು ಸಭೆಯು ಪರಿಶೀಲಿಸಿ ಯುಜಿಸಿ ನಿಯಮಗಳು ಮತ್ತು ಷರತ್ತುಗಳ ರೀತ್ಯಾ ಸೆಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಅನುಮೋದನೆ ನೀಡಿತು.

೨೦೪.೨೯ ಬಂಜಾರ ಭಾಷಾಭಿವೃದ್ಧಿ ಕೇಂದ್ರದ ಯೋಜನೆಯ ಕಾರ್ಯಗಳಿಗಾಗಿ ಎರಡನೇ ಕಂತಿನ ಅನುದಾನ ರೂ.೧,೪೮,೮೦,೦೦೦/-ಗಳು ಬಿಡುಗಡೆಯಾಗಿರುವ ಹಿನ್ನೆಲೆಯಲ್ಲಿ ಬಂಜಾರ ಭಾಷಾಭಿವೃದ್ಧಿ ಕೇಂದ್ರದ ಚಟುವಟಿಕೆಗಳನ್ನು ಪುನರಾರಂಭಿಸಿ ಕೇಂದ್ರಕ್ಕೆ ಬೇಕಾದ ಸಿಬ್ಬಂದಿಗಳ ನೇಮಕ ಮತ್ತು ಯೋಜನೆಗಳ ನಿರ್ವಹಣೆ ಕುರಿತು.

ನಿರ್ಣಯ : ಸದರಿ ಪ್ರಸ್ತಾವವನ್ನು ಪರಿಶೀಲಿಸಿದ ಸಭೆಯು ಬಂಜಾರ ಭಾಷಾಭಿವೃದ್ಧಿ ಕೇಂದ್ರದ ಯೋಜನೆಗಳನ್ನು ಮುಂದುವರೆಸಲು ಅನುಮೋದನೆ ನೀಡಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು